# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1302 |
| ಸದಸ್ಯರ ಹೆಸರು | ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.03.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನೆಲೆಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಪಂಗಡಗಳ ಹೆಸರು ಮತ್ತು ಜನಸಂಖ್ಯೆ ವಿವರ ನೀಡುವುದು; | ಬಾಗಲಕೋಟೆ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನೆಲೆಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಪಂಗಡಗಳ ಹೆಸರು ಮತ್ತು ಜನಸಂಖ್ಯೆಯ ವಿವರ ಪ್ರಸ್ತುತ ಲಭ್ಯವಿರುವುದಿಲ್ಲ. |
| ಆ) | 2007-08 ರಿಂದ 2022-23 ರವರೆಗೆ ಜಿಲ್ಲೆಯಲ್ಲಿ ಸದರಿ ಜನಾಂಗದ ಜನರಿಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು? ವಿವಿಧ ಹಂತದವರೆಗೆ ನಿರ್ಮಿಸಿಕೊಂಡಿರುವ ಮನೆಗಳ ಪ್ರಗತಿಯ ವಿವರ ನೀಡುವುದು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಅಲೆಮಾರಿ/ಅರೆ ಅಲೆಮಾರಿ ಸಮುದಾಯಕ್ಕೆ ವಸತಿ ನಿರ್ಮಾಣ ಕಾಮಗಾರಿಯನ್ನು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಪಡೆದಿರುವ ಮಾಹಿತಿಯಂತೆ ಬಾಗಲಕೋಟೆ ಜಿಲ್ಲೆಯಲ್ಲಿ ಅಲೆಮಾರಿ/ಅರೆ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ 2007-08 ರಿಂದ 2022-23ರವರೆಗೆ ಒಟ್ಟು-115 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ ಒಟ್ಟು-86 ಮನೆಗಳು ಪೂರ್ಣಗೊಂಡಿದ್ದು, 11 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, 05 ಮನೆಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಬೇಕಿದ್ದು, ಇನ್ನುಳಿದಂತೆ 13 ಮನೆಗಳನ್ನು ರದ್ದುಪಡಿಸಲಾಗಿದೆ. ಮನೆಗಳ ಭೌತಿಕ ಪ್ರಗತಿಯ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

..2

| | | |
|---|---|---|
| ಇ) | ಜಿಲ್ಲೆಯಲ್ಲಿ ಸದರಿ ಜನಾಂಗದವರಿಗೆ ಸಂಬಂಧಿಸಿದಂತೆ ನಿವೇಶನ ರಹಿತ ಮತ್ತು ವಸತಿ ರಹಿತ ಸರ್ವೇ ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ನಿವೇಶನ ಮತ್ತು ವಸತಿ ರಹಿತರ ವಿವರಗಳನ್ನು ನೀಡುವುದು; ಯಾವ ಕಾಲಮಿತಿಯಲ್ಲಿ ಸರ್ವೇ ನಡೆಸಲಾಗುವುದು; | ಬಾಗಲಕೋಟೆ ಜಿಲ್ಲೆಯಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ಸಂಬಂಧಿಸಿದಂತೆ ನಿವೇಶನ ರಹಿತ ಮತ್ತು ವಸತಿ ರಹಿತ ಸರ್ವೇ ನಡೆಸಲಾಗಿರುವುದಿಲ್ಲ.<br><br>ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ 2025ರ ಸೆಪ್ಟೆಂಬರ್ ಮಾಹೆಯಲ್ಲಿ ಅಲೆಮಾರಿ/ ಅರೆಅಲೆಮಾರಿ ಸಮುದಾಯವೂ ಸೇರಿದಂತೆ ಕರ್ನಾಟಕ ರಾಜ್ಯದಲ್ಲಿ ವಾಸವಿರುವ ಎಲ್ಲಾ ಸಮುದಾಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲಾಗಿರುತ್ತದೆ. ಈ ಸಮೀಕ್ಷೆಯಲ್ಲಿ ನಿವೇಶನ ಮತ್ತು ವಸತಿ ರಹಿತ ವಿವರಗಳೂ ಸಹ ಸೇರಿರುತ್ತವೆ. ಆಯೋಗದಿಂದ ಸರ್ಕಾರಕ್ಕೆ ಇನ್ನೂ ವರದಿ ಸಲ್ಲಿಕೆಯಾಗಿರುವುದಿಲ್ಲ. |
| ಈ) | ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ಜನರಿಗೆ ಅಧಿಕಾರಿಗಳು ಸಮರ್ಪಕವಾಗಿ ಯೋಜನೆಯ ಮಾಹಿತಿ ತಿಳಿಸದೇ ಇರುವುದರಿಂದ ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನಾಂಗದವರಿದ್ದರೂ ಯೋಜನೆಗಳ ಸದುಪಯೋಗವಾಗದೇ ಇರುವುದರಿಂದ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಯೋಜನೆ ಸದುಪಯೋಗವಾಗಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲೆಮಾರಿ/ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ವತಿಯಿಂದ ಅಲೆಮಾರಿ/ ಅರೆ ಅಲೆಮಾರಿ ಸಮುದಾಯದ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ<br>2. ಮೆಟ್ರಿಕ್ ನಂತರ ವಿದ್ಯಾರ್ಥಿವೇತನ.<br>3. ಆಶ್ರಮ ಶಾಲೆಗಳ ನಿರ್ವಹಣೆ.<br>4. ವಸತಿ ಯೋಜನೆ.<br>5. ಸ್ವಯಂ ಉದ್ಯೋಗ ಯೋಜನೆಡಿ ಸಾಲ ಸೌಲಭ್ಯ ಮಂಜೂರು.<br>6. ಗಂಗಾ ಕಲ್ಯಾಣ ನೀರಾ ವರಿ ಯೋಜನೆ.<br>7. ಅರಿವು ಕಾರ್ಯಕ್ರಮದ ಯೋಜನೆಯಡಿ ಶೈಕ್ಷಣಿಕ ಸಾಲ ಮಂಜೂರು.<br>8. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ ಸೌಲಭ್ಯ.<br>9. ಸ್ವಾವಲಂಬಿ ಸಾರಥಿ ಯೋಜನೆಡಿ ವಾಹನಗಳ ಖರೀದಿಗೆ ಸಾಲ ಸೌಲಭ್ಯ.<br>10. ಭೂ ಖರೀದಿ ಯೋಜನೆ. |

| | | |
|---|---|---|
| | | ನಿಗಮದ ಎಲ್ಲಾ ಯೋಜನೆಗಳನ್ನು ಆನ್‌ಲೈನ್ ಮೂಲಕ ಅರ್ಜಿ ಕರೆದು ವಿವಿಧ ಹಂತಗಳಲ್ಲಿ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆ ಮೂಲಕ ಯೋಜನೆಗಳ ಅರ್ಜಿಯನ್ನು ಕರೆಯುವುದರ ಮೂಲಕ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ.<br>ಪರಿಣಾಮವಾಗಿ ಎಲ್ಲಾ ವಿವಿಧ ಯೋಜನೆಗಳಲ್ಲಿ ನಿಗದಿತ ಗುರಿಗಿಂತ ಐದರಿಂದ ಹತ್ತು ಪಟ್ಟು ಹೆಚ್ಚು ಅರ್ಜಿಗಳು ಸ್ವೀಕೃತವಾಗುತ್ತಿವೆ. ಹೆಚ್ಚು ಜನಸಂದಣಿ ಹಾಗೂ ಕಛೇರಿ ಕೆಲಸಗಳಿಗೆ ಬರುವ ಸ್ಥಳಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಕಛೇರಿ ಹಾಗೂ ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ ಯೋಜನೆಗಳ ವಿವರವನ್ನು ಪ್ರಚುರ ಪಡಿಸಲಾಗುತ್ತಿದೆ. ಈ ಮೂಲಕ ಅಲೆಮಾರಿ/ ಅರೆ ಅಲೆಮಾರಿ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಸದುಪಯೋಗವಾಗುವಂತೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಹಿಂವಕ 81 ಬಿಸಿಎ 2026**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಅನುಬಂಧ-1

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1302ಕ್ಕೆ

ಬಾಗಲಕೋಟೆ ಜಿಲ್ಲೆಯ 2008-09 ರಿಂದ 2022-23ನೇ ಸಾಲಿನವರೆಗೆ ವಿವಿಧ ಹಂತದವರೆಗೆ ನಿರ್ಮಿಸಿರುವ ಮನೆಗಳ ತಾಲ್ಲೂಕುವಾರು ಪ್ರಗತಿ ವಿವರ

| District | Taluk | Scheme | SubScheme | Series | Approved | Completed | Foundation | Lintel | Roof | Total Progress | Unstarred |
|---|---|---|---|---|---|---|---|---|---|---|---|
| Bagalkot | Jamakhandi | Rural Special Housing -Nomadic Tribes | Nomadic Tribes | 2008-09 | 6 | 6 | 0 | 0 | 0 | 0 | 0 |
| Bagalkot | Ilkal | Rural Special Housing -Nomadic Tribes | Nomadic Tribes | 2008-09 | 2 | 2 | 0 | 0 | 0 | 0 | 0 |
| Bagalkot | Rabaakavi-Banahatti | Rural Special Housing -Nomadic Tribes | Nomadic Tribes | 2008-09 | 3 | 3 | 0 | 0 | 0 | 0 | 0 |
| Bagalkot | Bagalkot | Rural Special Housing -Nomadic Tribes | Nomadic Tribes | 2008-09 | 3 | 2 | 0 | 0 | 0 | 0 | 0 |
| | | | | 2008-09 Total | 14 | 13 | 0 | 0 | 0 | 0 | 0 |
| Bagalkot | Badami | Devraj Urs Housing Scheme-Rural | Nomadic Tribes-BCWDC Dept | 2014-15 | 2 | 2 | 0 | 0 | 0 | 0 | 0 |
| Bagalkot | Jamakhandi | Devraj Urs Housing Scheme-Rural | Nomadic Tribes-BCWDC Dept | 2014-15 | 4 | 0 | 0 | 0 | 0 | 0 | 0 |
| | | | | 2014-15 Total | 6 | 2 | 0 | 0 | 0 | 0 | 0 |
| Bagalkot | Bagalkot | Devraj Urs Housing Scheme-Rural | Nomadic Tribes | 2015-16 | 9 | 9 | 0 | 0 | 0 | 0 | 0 |
| | | | | 2015-16 Total | 9 | 9 | | 0 | 0 | 0 | 0 |
| Bagalkot | Bagalkot | Devraj Urs Housing Scheme-Rural | Nomadic Tribes | 2017-18 | 5 | 4 | 1 | 0 | 0 | 1 | 0 |
| Bagalkot | Hunugund | Devraj Urs Housing Scheme-Rural | Nomadic Tribes | 2017-18 | 1 | 0 | 0 | 0 | 0 | 0 | 0 |
| Bagalkot | Jamakhandi | Devraj Urs Housing Scheme-Rural | Nomadic Tribes | 2017-18 | 30 | 27 | 0 | 2 | 0 | 2 | 0 |
| | | | | 2017-18 Total | 36 | 31 | 1 | 2 | 0 | 3 | 0 |
| Bagalkot | Bagalkot | Devraj Urs Housing Scheme-Rural | Nomadic Tribes-BCWDC Dept | 2020-21 | 4 | 1 | 0 | 1 | 2 | 3 | 0 |
| Bagalkot | Ilkal | Devraj Urs Housing Scheme-Rural | Nomadic Tribes | 2020-21 | 22 | 11 | | 0 | 0 | 5 | 0 |
| Bagalkot | Jamakhandi | Devraj Urs Housing Scheme-Rural | Nomadic Tribes-BCWDC Dept | 2020-21 | 13 | 10 | 0 | 0 | 0 | 0 | 3 |
| Bagalkot | Mudhol | Devraj Urs Housing Scheme-Rural | Nomadic Tribes-BCWDC Dept | 2020-21 | 10 | 8 | 0 | 0 | 0 | 0 | 2 |
| | | | | 2020-21 Total | 49 | 30 | 5 | 1 | 2 | 8 | 5 |
| Bagalkot | Bagalkot | Devraj Urs Housing Scheme-Rural | Nomadic Tribes-BCWDC Dept | 2022-23 | 1 | 1 | 0 | 0 | 0 | 0 | 0 |
| | | | | 2022-23 Total | 1 | 1 | 0 | 0 | 0 | 0 | 0 |
| | | | | **Grand Total** | **115** | **86** | **6** | **3** | **2** | **11** | **5** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು